# ಇಂಗ್ಲೆಂಡಿನ ಮನೋಹರ ನಾಲೆಗಳು



'ಸ್ನೇಕ್ ಬ್ರಿಡ್ಜ್' ಎಂದು ಕರೆಸಿಕೊಳ್ಳುವ ಮ್ಯಾಕ್ಲೆಸ್ಫೀಲ್ಡ್ ನಾಲೆ

■ **ಅನುರಾಧ ಜಗಲೂರು**

ಮೈಸೂರಿನಲ್ಲಿ ಹುಟ್ಟಿ ಬೆಳೆದ ನನಗೆ, ನಾಲೆ ಎಂದರೆ ವಿಶ್ವೇಶ್ವರಯ್ಯ ನಾಲೆ. ಕೃಷ್ಣರಾಜ ಸಾಗರ ಅಣೆಕಟ್ಟಿನಿಂದ ರಭಸವಾಗಿ ಹೊರನುಗ್ಗಿ ಹರಿಯುವ ನಾಲೆಯನ್ನು ವಿಸ್ಮಿತಳಾಗಿ, ಬೆರಗುಗಣ್ಣುಗಳಿಂದ ನೋಡುತ್ತ ನಿಲ್ಲುತ್ತಿದ್ದುದು ಚೆನ್ನಾಗಿ ನೆನಪಿದೆ. ಈ ನಾಲೆ ಮುಂದೆ ಕವಲೊಡೆದು ಮೈಸೂರು, ಮಂಡ್ಯ ಜಿಲ್ಲೆಗಳಲ್ಲಿ ಹಸಿರು ಪೈರಿನ ಮಧ್ಯೆ ಶಾಂತವಾಗಿ ಹರಿಯುವುದನ್ನು ನೋಡುತ್ತಾ ನಿಂತರೆ ಈಗಲೂ ಮನಸ್ಸಿಗೆ ಆಹ್ಲಾದಕರವೆನಿಸುತ್ತದೆ. ಎರಡು ಮೂರು ಅಡಿಯಗಲದ ಸಣ್ಣ ನಾಲೆಗಳಲ್ಲಿ ಕಾಗದದ ದೋಣಿ ತೇಲಿಬಿಡಬೇಕೆಂದೂ, ದೊಡ್ಡ ನಾಲೆಗಳಲ್ಲಿ ನಿಜವಾದ ದೋಣಿಯೊಂದರ ಮೇಲೆ ಕುಳಿತು ನಾನೂ ನಿಧಾನವಾಗಿ ತೇಲಿ ಹೋಗಬೇಕೆಂದೂ ಈಗಲೂ ಬಹಳ ಆಸೆ ಆಗುತ್ತದೆ.

ನಾಲೆಗಳನ್ನು ನೋಡಿ ಇಷ್ಟು ಸಂತೋಷ ಪಡುವ ನನಗೆ ಇಂಗ್ಲೆಂಡಿನಲ್ಲಿ ವಾಸಿಸುವುದು ಒಂದು ರೀತಿಯ ಹಬ್ಬ. ನಾಲೆಗಳಿಂದಾಗಿ ವೆನಿಸ್ ನಗರವು ಪ್ರಪಂಚಾದ್ಯಂತ ಹೆಸರುವಾಸಿಯಾಗಿರಬಹುದು. ಆದರೆ ಆ ವಿಷಯದಲ್ಲಿ ಇಂಗ್ಲೆಂಡ್ ಏನೂ ಕಡಿಮೆಯಿಲ್ಲ. ಈ ದೇಶದಲ್ಲಿ ಎಲ್ಲೇ ನಿಂತರೂ ಅಲ್ಲಿಂದ ಐದು ಮೈಲಿ ದೂರದೊಳಗೆ ಒಂದು ನಾಲೆ ಖಂಡಿತ ಇರುತ್ತದೆ! 'ಓಡಮನೆ'ಗಳು (**Narrow boat**) ಸಂಚಾರ ಮಾಡಲಾಗುವಂತಹ ಕಾಲುವೆಗಳು ಸುಮಾರು ಎರಡು ಸಾವಿರ ಮೈಲಿಗಳು ಇವೆ. ಅದಿರಲಿ, ಇಂಗ್ಲೆಂಡಿನಲ್ಲಿ ನಾಲೆಗಳ ಬಗೆಗಿನ ವಸ್ತುಸಂಗ್ರಹಾಲಯಗಳೇ ಹನ್ನೆರಡಾದರೂ ಇವೆ. ಈ ನಾಲೆಗಳಲ್ಲಿ, ಸುಮಾರು ನಾಲ್ಕು ಸಾವಿರ ಓಡಮನೆಗಳಲ್ಲಿ, ಸುಮಾರು ಹದಿನೈದು ಸಾವಿರ ಜನರು ಸಂಸಾರ ಹೂಡಿಕೊಂಡಿದ್ದಾರೆ.

ಚಿಕ್ಕವಳಾಗಿದ್ದಾಗ ಕರ್ನಾಟಕದಲ್ಲಿ ನಾನು ನೋಡಿದ್ದು ವ್ಯವಸಾಯಕ್ಕೆ ಬೇಕಾದ, ನೀರಾವರಿ ಯೋಜನೆಗೆಂದು ಕಟ್ಟಲಾದ ನಾಲೆಗಳು. ಅವೆಲ್ಲವೂ ನದಿಯ ನೀರನ್ನು ದೂರದ ನೀರಿಲ್ಲದ ಪ್ರದೇಶಗಳಿಗೆ ಕೊಂಡೊಯ್ಯುತ್ತಿದ್ದವು. ಆದರೆ ಇಲ್ಲಿನ 'ನಾಲಾ ವಸ್ತು ಸಂಗ್ರಹಾಲಯ'ಗಳ ಪ್ರಕಾರ, ನೀರಿನ ಒಂದು ಕಾಲುವೆಯು 'ನಾಲೆ' ಎನಿಸಿಕೊಳ್ಳಬೇಕಾದರೆ, ಅದರೊಳಗೆ ನದಿಯ ನೀರು ಹರಿದು ಬರುತ್ತಿರಬಾರದು. ನೀರು ಹರಿಯದೆ ನಿಂತಿರಬೇಕು. ಯಾವುದೇ ಮೂಲಗಳಿಂದ ನೀರನ್ನು ಒದಗಿಸಿ ತಂದು ನಾಲೆಗಳಲ್ಲಿ ತುಂಬಿರಬೇಕು. ಅಲ್ಲದೆ ಈ ನಾಲೆಗಳ ಪಥಗಳು ಬೇರೆ ಬೇರೆ ಮಟ್ಟಗಳಲ್ಲಿದ್ದು, ದೋಣಿಗಳು ಒಂದು ಮಟ್ಟದಿಂದ ಇನ್ನೊಂದು ಮಟ್ಟಕ್ಕೆ ಹತ್ತಲು ಅಥವಾ ಇಳಿಯಲು, ಜಲಬಂಧಗಳು (**locks**) ಕೆಲವಾದರೂ ಇರಬೇಕು.

ಪುರಾತನ ಕಾಲದಲ್ಲಿ ಇಂಗ್ಲೆಂಡನ್ನು ರೋಮನ್ನರು ಆಳುತ್ತಿದ್ದಾಗಲೂ ಅಲ್ಲೊಂದು ಇಲ್ಲೊಂದು ನೀರಾವರಿ ನಾಲೆಗಳು ಕಾಣಬರುತ್ತಿದ್ದವಂತೆ. ಆದರೆ ಹದಿನೆಂಟನೆಯ ಶತಮಾನದಲ್ಲಿ ಔದ್ಯೋಗಿಕ ಕ್ರಾಂತಿಯ ಸಂಭ್ರಮದಲ್ಲಿ ನಾಲೆಗಳನ್ನು ಸಾಗಣೆಗಾಗಿ ಉಪಯೋಗಿಸುವುದರ